# ಜನ ಸಮುದಾಯವನ್ನು ಸೆಳೆಯುವಲ್ಲಿ ರಂಗಭೂಮಿ ನಡೆದು ಬಂದ ದಾರಿ

**ಶ್ರೀಲತಾ ಎ.**

ಕನ್ನಡ ವಿಭಾಗ, ನಾಗಾರ್ಜುನ ಪದವಿ ಕಾಲೇಜು, ಬೆಂಗಳೂರು.

**DOI: https://doi.org/10.5281/zenodo.18776248**

## ABSTRACT:

ನಾಟಕ ಆಧುನಿಕ ಸಾಹಿತ್ಯದ ಒಂದು ಪ್ರಕಾರವಾಗಿದೆ. ಕವಿರತ್ನ ಕಾಳಿದಾಸನ ಪ್ರಕಾರ ಕಾವ್ಯಕ್ಕೆ ನಾಟಕದ ಗುಣವೂ ಇದೆ. ನಾಟಕವು ಭಿನ್ನ ಭಾವನೆಗಳನ್ನು ಮೂಡಿಸಿ ಏಕ ಕಾಲಕ್ಕೆ ವಿಭಿನ್ನ ಅಭಿರುಚಿಗಳ ಜನರನ್ನು ಆಕರ್ಷಿಸಲು ಶಕ್ತವಾಗಿದೆ. ಉತ್ತಮ ನಟನೆಯು ಖಂಡಿತವಾಗಿ ಜನರನ್ನು ಆಕರ್ಷಿಸುತ್ತದೆ. ಹಾಗಾದರೆ ನಟನೆ ಎಂದರೇನು? ಭರತನು ತನ್ನ ನಾಟ್ಯಶಾಸ್ತ್ರದಲ್ಲಿ "ನಾಟಕ ಎಂದರೆ ಲೋಕವ್ಯವಹಾರದ ಅನುಕರಣೆ" ಎಂದಿದ್ದಾನೆ. ಮೂಲದಲ್ಲಿ ಅದು ಅನುಕರಣೆ ಇದ್ದಿರಬಹುದು. ಆದರೆ ಕ್ರಮೇಣ ಅನುಕರಿಸುವವನ ಕಲ್ಪನಾ ಶಕ್ತಿ, ಬುದ್ಧಿವಂತಿಕೆ, ತೋರಿಕೆಯ ಸಹಜತೆ ಇವುಗಳಿಂದ ಅನುಕರಣೆಯೇ ಒಂದು ಕಲೆಯಾಗಿ ಬೆಳೆಯಿತು. ಅನುಕರಣ ಪ್ರವೃತ್ತಿ ಎಲ್ಲರಲ್ಲಿ ಇದ್ದರೂ ಅವರು ನಟರಾಗುವುದಿಲ್ಲ. ನಟನಾ ಪ್ರವೃತ್ತಿಯು ಒಂದು ವಿಶೇಷ ಶಕ್ತಿಯಾಗಿರುತ್ತದೆ.

ನಟನೆಗೆ ಸೂಕ್ತ ವೇಷಭೂಷಣಗಳಲ್ಲದೆ ಸಂಭಾಷಣಾ ಚಾಕಚಕ್ಯತೆ ಇರಲೇಬೇಕು. ನಟನಾದವನು ಲೋಕಾನುಭವ, ಭಾವಾನುಕರಣೆ ಎರಡನ್ನೂ ಹೊಂದಿರಬೇಕು. ಇದನ್ನೇ ಭರತ 'ಆಂಗಿಕ' ಎಂದಿದ್ದಾನೆ. ರಂಗಭೂಮಿಯು ಜನರ ಸಂಸ್ಕೃತಿಯೊಂದಿಗೆ ಆಳವಾಗಿ ಬೆಸೆದುಕೊಂಡಿದೆ. ಸಾಮಾಜಿಕ ಮೌಲ್ಯಗಳು, ನಂಬಿಕೆಗಳು ಮತ್ತು ನಂಬಿಕೆಗಳನ್ನು ಪ್ರತಿಬಿಂಬಿಸುವ ಕನ್ನಡಿಯಾಗಿದೆ. ಹಾಗಾಗಿ ನಮ್ಮ ಸುತ್ತಣ ಜಗತ್ತಿನ ಬದುಕು ಹಾಗೂ ಕ್ರಿಯೆಗಳ ಕಲಾತ್ಮಕ ಅನುಕರಣೆಯೇ ನಾಟಕ ಎನ್ನಬಹುದು. ಆಂತರಿಕ ಹಾಗೂ ಬಾಹ್ಯ ಜಗತ್ತಿನ ಒಳಗಡೆ ನಡೆಯುವ ಸಂಘರ್ಷಗಳು ನಾಟಕದ ವಿಶೇಷವಾಗಿರುತ್ತದೆ.

ಆಧುನಿಕ ನಾಟಕ ಪರಂಪರೆಗೆ ನೂರು ವರ್ಷಗಳ ಇತಿಹಾಸವಿದೆ. ಕನ್ನಡ ನಾಟಕ ಪರಂಪರೆಯಲ್ಲಿ ನವೋದಯ ಸಂದರ್ಭದ ಸಾಹಿತಿಗಳು ಇಂಗ್ಲಿಷಿನಿಂದ ಅನುವಾದ, ರೂಪಾಂತರಗಳನ್ನು ಮಾಡಿದರು. ಇದರಿಂದಾಗಿ ಇಂಗ್ಲಿಷ್ ಜನಜೀವನ, ರಾಜಕೀಯ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಪ್ರೇರಣೆಗಳು ಕನ್ನಡದ ಮೇಲೆ ಉಂಟಾಯಿತು. ಇದರಿಂದ ಕನ್ನಡ ಸಾಹಿತ್ಯ ನೂತನ ರೂಪರೇಷೆಗಳನ್ನು ತಳೆಯಲು ಪಾಶ್ಚಾತ್ಯ ದೇಶಗಳು ಪ್ರಮುಖ ಶಕ್ತಿಯಾದವು. ಟಿ.ಪಿ. ಕೈಲಾಸಂ ಮತ್ತು ಶ್ರೀರಂಗರು ಮಧ್ಯಮ ವರ್ಗದ ಸಮಸ್ಯೆಗಳ ಕುರಿತು ರಂಗ ಚಿತ್ರಗಳನ್ನು ನಿರ್ಮಿಸಿ ಸಮಾಜದ ನಿಜ ಸ್ವರೂಪವನ್ನು ತಮ್ಮ ತೀಕ್ಷ್ಣ ನಾಟಕೀಯ ದೃಷ್ಟಿಯಿಂದ ಬಯಲಿಗೆಳೆದರು. ಒಟ್ಟಿನಲ್ಲಿ ಆಧುನಿಕ ನಾಟಕದ ಉಗಮದಿಂದಾಗಿ ಪೌರಾಣಿಕ ವಸ್ತು ವಿಷಯಗಳಿಗೆ ಮಾತ್ರ ಆದ್ಯತೆಯಿದ್ದ ಕಾಲದಲ್ಲಿ ಸಾಮಾಜಿಕ ವಸ್ತುವಿನಂತ ಸಾರ್ವಕಾಲಿಕ ವಿಷಯಗಳತ್ತ ನಾಟಕಕಾರರ ಗಮನ ಹರಿದಿದ್ದು ಅತ್ಯಂತ ಮಹತ್ವದ ವಿಚಾರವಾಗಿದೆ.

ರಂಗಭೂಮಿಯು ಕೇವಲ ಲಲಿತ ಕಲೆಗಳ ಬೆಳವಣಿಗೆ ಅಷ್ಟೇ ಅಲ್ಲ. ಲೋಕ ವ್ಯವಹಾರಗಳಲ್ಲಿ ಬರುವುದೆಲ್ಲವೂ ರಂಗಭೂಮಿಯ ಪರಿಕರಗಳಾಗಬಲ್ಲವು ಎಂಬುದನ್ನು ಮರೆಯಲಾಗದು. ರಂಗಭೂಮಿಯು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದೆ. ಆಧುನಿಕ ಕನ್ನಡ ರಂಗಭೂಮಿಯಲ್ಲಿ ಹೊಸ ಅಲೆಯನ್ನು ಎಬ್ಬಿಸಿದವರು ರಂಗಕರ್ಮಿ ಬಿ.ವಿ. ಕಾರಂತರು. ಅವರು ರಂಗಭೂಮಿಯ ಪುನರುಜ್ಜೀವನಕ್ಕೆ ಕಾರಣರಾದರು. ನಾಟಕವನ್ನು ವೈಜ್ಞಾನಿಕ ದೃಷ್ಟಿಕೋನದಲ್ಲಿ ನೋಡುವುದು, ವೇದಿಕೆಯನ್ನು ಹೊಸ ರೀತಿಯಲ್ಲಿ ರಚಿಸಿ ಬಣ್ಣ ಬಣ್ಣದ ಪರದೆಗಳನ್ನು ಕಿತ್ತು ಸಾಂಕೇತಿಕತೆಯನ್ನು ಅಳವಡಿಸಿದರು. ವೃತ್ತಿ ರಂಗಭೂಮಿ, ಜನಪದ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಗಳ ಸಮ್ಮಿಶ್ರ ಮಾದರಿಯ ನೂತನ ಸಂಪ್ರದಾಯವನ್ನು ಕಾರಂತರು ಪರಿಚಯಿಸಿ ನಾಟಕವು ಪ್ರಧಾನವಾಗಿ ಪ್ರದರ್ಶನ ಕಲೆ ಎಂಬುದನ್ನು ಎತ್ತಿ ಹಿಡಿದರು.

**KEYWORDS:**

ಆಧುನಿಕ ಸಾಹಿತ್ಯ, ನಟನಾ ಪ್ರವೃತ್ತಿ, ಸಾಮಾಜಿಕ ಮೌಲ್ಯಗಳು, ರಂಗಭೂಮಿ.

**ಉದ್ದೇಶ:**

- ಆಧುನಿಕ ರಂಗಭೂಮಿಯಲ್ಲಿ ಆದ ಬದಲಾವಣೆ ಜನರನ್ನು ಸೆಳೆಯುವಲ್ಲಿ ಹೇಗೆ ಯಶಸ್ವಿಯಾಯಿತು.
- ಆಧುನಿಕ ರಂಗಭೂಮಿ ಪರಿಣಾಮಕಾರಿಯಾಗಿ ಜನಮನಕ್ಕೆ ಸ್ಪಂದಿಸುವ ಕುರಿತು.

ಆಧುನಿಕ ನಾಟಕದ ಪರಂಪರೆ ನವೋದಯ ಕಾಲದಲ್ಲಿ ಸ್ವತಂತ್ರ ನಾಟಕಗಳ ರಚನೆಗಳೊಂದಿಗೆ ಭಾಷಾಂತರ, ರೂಪಾಂತರಗೊಂಡು ಐತಿಹಾಸಿಕವಾಗಿ ಸಮಕಾಲೀನ ವಸ್ತುಗಳ ಬಗ್ಗೆ ಪ್ರಸ್ತುತಪಡಿಸಿತು. ಅದು ಸಮಾಜವನ್ನು ಪ್ರತಿಬಿಂಬಿಸುವ ಕನ್ನಡಿಯಾಗಿದೆ. ಹಾಗಾಗಿ ನಮ್ಮ ಸುತ್ತಣ ಜಗತ್ತಿನ ಬದುಕು ಹಾಗೂ ಕ್ರಿಯೆಗಳ ಕಲಾತ್ಮಕ ಅನುಕರಣೆಯೇ ನಾಟಕ ಎನ್ನಬಹುದು. ಆಂತರಿಕ ಹಾಗೂ ಬಾಹ್ಯ ಜಗತ್ತಿನ ಒಳಗಡೆ ನಡೆಯುವ ಸಂಘರ್ಷಗಳು ನಾಟಕದ ವಿಷಯವಾಗಿರುತ್ತದೆ. ಎ. ಆರ್. ನಾಗಭೂಷಣರವರು ಅಭಿಪ್ರಾಯಿಸುವಂತೆ, "ಲಿಖಿತ ನಾಟಕ ಕೃತಿಯಲ್ಲಿ ನಾಟಕಕಾರ ನೇರವಾಗಿ ಏನನ್ನೂ ಪ್ರಸ್ತಾಪಿಸಲು ಸಾಧ್ಯವಿಲ್ಲವಾದುದರಿಂದ ಅನೇಕ ಸವಾಲುಗಳು ಎದುರಾಗುತ್ತವೆ. ನಾಟಕದ ಕ್ರಿಯೆಯ ಬೆಳವಣಿಗೆಯನ್ನು ಸೂಚಿಸಲು ಮತ್ತು ಪಾತ್ರಗಳ ಅಂತರಂಗವನ್ನು ಅಭಿವ್ಯಕ್ತಿಸಲು ಅನೇಕ ಸಲ ಸಂಭಾಷಣೆಯೊಂದೇ ಸಾಕಾಗುವುದಿಲ್ಲ. ಹೀಗಾಗಿ ಕೆಲವು ತಂತ್ರಗಳನ್ನು ನಾಟಕಕಾರ ರೂಢಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ. ಈ ತಂತ್ರಗಳೆಂದರೆ ಮೇಳ, ಸೂತ್ರಧಾರ, ಸ್ವಗತ, ಜನಾಂತಿಕ, ಹಾಡು, ಸಂಗೀತ, ನರ್ತನ, ರಂಗ ಸೂಚನೆಗಳು, ದೃಶ್ಯ, ಆವರಣ ತಂತ್ರ ಇತ್ಯಾದಿಗಳು."

### ರಂಗಭೂಮಿಯ ಬಗ್ಗೆ ಆಂಗ್ಲ ಕವಿ ಷೇಕ್ಸ್‌ಪಿಯರ್‌ನ ಅಭಿಪ್ರಾಯ

ಖ್ಯಾತ ಆಂಗ್ಲ ಕವಿ ಮತ್ತು ನಾಟಕಕಾರ ಷೇಕ್ಸ್‌ಪಿಯರ್ ರಂಗಭೂಮಿಯನ್ನು ಒಂದು ಪ್ರಬಲ ಕಲಾರೂಪವಾಗಿ ನೋಡಿದರು. ಅವರ ಪ್ರಕಾರ "ನಾವು ವಿಶಾಲವಾದ ಭಾಷೆ ಮತ್ತು ಸಂಪ್ರದಾಯಗಳನ್ನು ಬಳಸಿಕೊಂಡು ಜನಜೀವನವನ್ನು ಪ್ರತಿಬಿಂಬಿಸುವ ಕನ್ನಡಿಯಂತಿರುವ ರಂಗಸ್ಥಳದಲ್ಲಿ ನಟಿಸುವುದು ಮತ್ತು ಕಥಾವಸ್ತುವನ್ನು ಆಳವಾದ ಮನೋವಿಜ್ಞಾನದೊಂದಿಗೆ ಸಂಯೋಜಿಸುವುದು." ಅವರು ಮಾನವ ಸಂಘರ್ಷವನ್ನು ಅನ್ವೇಷಿಸುವ ಮೂಲಕ ಪ್ರಣಯ ದುರಂತದಂತಹ ಹೊಸ ಪ್ರಕಾರಗಳನ್ನು ರಚಿಸಿದರು. ರಂಗಭೂಮಿಯ ಹೊಂದಾಣಿಕೆಯ ಶಕ್ತಿಯ ಪ್ರದರ್ಶನವು ಭಾವನಾತ್ಮಕತೆಯೊಂದಿಗೆ ನೈತಿಕತೆಯನ್ನು ಒತ್ತಿ ಹೇಳಬೇಕು.

ಆಧುನಿಕ ನಾಟಕ ಪರಂಪರೆಗೆ ನೂರು ವರ್ಷಗಳ ಇತಿಹಾಸವಿದೆ. ಕನ್ನಡ ನಾಟಕ ಪರಂಪರೆಯಲ್ಲಿ ನವೋದಯ ಸಂದರ್ಭದ ಸಾಹಿತಿಗಳು ಇಂಗ್ಲಿಷಿನಿಂದ ಅನುವಾದ, ರೂಪಾಂತರಗಳನ್ನು ಮಾಡಿದರು. ಇದರಿಂದಾಗಿ ಇಂಗ್ಲಿಷ್ ಜನಜೀವನ, ರಾಜಕೀಯ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಪ್ರೇರಣೆಗಳು ಕನ್ನಡದ ರಂಗಭೂಮಿಯ ಮೇಲೆ ಪರಿಣಾಮ ಬೀರಿದವು. ಇದರಿಂದ ಕನ್ನಡ ಸಾಹಿತ್ಯ ನೂತನ ರೂಪರೇಷೆಗಳನ್ನು ತಳೆಯಲು ಪಾಶ್ಚಾತ್ಯ ಸಾಹಿತ್ಯವೇ ಪ್ರಮುಖ ಪ್ರೇರಕ ಶಕ್ತಿಯಾಯಿತು.

ಆಧುನಿಕ ಕನ್ನಡ ರಂಗಭೂಮಿಯಲ್ಲಿ ಹೊಸ ಅಲೆಯನ್ನು ಎಬ್ಬಿಸಿದ ರಂಗಕರ್ಮಿ ಬಿ.ವಿ. ಕಾರಂತರು. ಅವರು ರಂಗಭೂಮಿಯ ಪುನರುಜ್ಜೀವನಕ್ಕೂ ಕಾರಣರಾದರು. ನಾಟಕವನ್ನು ವೈಜ್ಞಾನಿಕ ದೃಷ್ಟಿಯಲ್ಲಿ ನೋಡುವುದು, ವೇದಿಕೆಯನ್ನು ಹೊಸ ರೀತಿಯಲ್ಲಿ ರಚಿಸಿ ಬಣ್ಣ ಬಣ್ಣದ ಪರದೆಗಳನ್ನು ಕಿತ್ತು ಸಾಂಕೇತಿಕತೆಯನ್ನು ಅಳವಡಿಸಿದರು. ವೃತ್ತಿ ರಂಗಭೂಮಿ, ಜನಪದ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಗಳ ಸಮ್ಮಿಶ್ರ ಮಾದರಿಯ ನೂತನ ಸಂಪ್ರದಾಯ ಮತ್ತು ರಂಗ ತಂತ್ರವನ್ನು ಕಾರಂತರು ಪ್ರಚುರಪಡಿಸಿ ನಾಟಕವು ಪ್ರಧಾನವಾಗಿ ಪ್ರದರ್ಶನ ಕಲೆ ಎಂಬುದನ್ನು ಎತ್ತಿ ಹಿಡಿದರು. ಅವರು ನಿರ್ದೇಶಿಸಿದ ನಾಟಕಗಳಲ್ಲಿ ದೊರೆ ಈಡಿಪಸ್, ಹಯವದನ, ಜೋಕುಮಾರಸ್ವಾಮಿ, ಸತ್ತವರ ನೆರಳು ಮುಂತಾದವು ಪ್ರಸಿದ್ಧವಾಗಿವೆ.

### ಸಮಾರೋಪ

ಜನ ಸಮುದಾಯವನ್ನು ಸೆಳೆಯುವಲ್ಲಿ ರಂಗಭೂಮಿಯ ಪಾತ್ರ ಮಹತ್ತರವಾದುದಾಗಿದೆ. ರಂಗಭೂಮಿಯು ಜನಸಾಮಾನ್ಯರ ಬದುಕಿನ ಅನುಭವವನ್ನು ರಂಗಸ್ಥಳದಲ್ಲಿ ಪ್ರದರ್ಶಿಸುತ್ತದೆ. ಉದಾಹರಣೆಗೆ ಬಿ.ಎಂ.ಶ್ರೀ ಅವರ 'ಅಶ್ವತ್ಥಾಮನ್' ನಾಟಕದಲ್ಲಿ ಬರುವ ಸನ್ನಿವೇಶಗಳು ಭಾವನಾತ್ಮಕತೆಯ ಅನುಭವವನ್ನು ನೀಡುತ್ತವೆ. ಗ್ರೀಕ್ ದುರಂತ ನಾಟಕದ ಕಲ್ಪನೆ, ಪುರಾಣದ ವಸ್ತುವೊಂದನ್ನು ಸಮಕಾಲೀನ ವಸ್ತುವೊಂದಕ್ಕೆ ಪ್ರಸ್ತುತಪಡಿಸುವುದು ಹಾಗೂ ಅದಕ್ಕೆ ತಾತ್ವಿಕ ಮತ್ತು ವೈಚಾರಿಕ ಸಂಬಂಧಗಳನ್ನು ಸೂಚಿಸುತ್ತದೆ. ರಂಗಭೂಮಿಯು ಶಿಕ್ಷಣ ಜಾಗೃತಿ ಮೂಡಿಸುವುದಲ್ಲದೇ ಸಮಾಜದ ಸಂಕೀರ್ಣ ಸಮಸ್ಯೆಗಳ ಬಗ್ಗೆ ಅರಿವನ್ನೂ

ಮೂಡಿಸುತ್ತದೆ. ಜಾಗತಿಕ ಮತ್ತು ಸ್ಥಳೀಯ ಸಂಪ್ರದಾಯಗಳ ಜನಜೀವನವನ್ನು ಪ್ರದರ್ಶಿಸುತ್ತದೆ. ಟಿ.ಪಿ. ಕೈಲಾಸಂ ಮತ್ತು ಶ್ರೀರಂಗರು ಮಧ್ಯಮ ವರ್ಗದ ಜನರ ಸಮಸ್ಯೆಗಳ ಕುರಿತು ರಂಗ ಚಿತ್ರಗಳನ್ನು ನಿರ್ಮಿಸಿ ಸಮಾಜದ ನಿಜ ಸ್ವರೂಪವನ್ನು ತಮ್ಮ ತೀಕ್ಷ್ಣ ನಾಟಕೀಯ ದೃಷ್ಟಿಯಿಂದ ಬಯಲಿಗೆಳೆದರು.

ಒಟ್ಟಿನಲ್ಲಿ ಆಧುನಿಕ ನಾಟಕ ಉಗಮದಿಂದಾಗಿ ಪೌರಾಣಿಕ ವಸ್ತು ವಿಷಯಗಳಿಗೆ ಮಾತ್ರ ಆದ್ಯತೆಯಿದ್ದ ಕಾಲದಲ್ಲಿ ಸಾಮಾಜಿಕ ಸಾರ್ವಕಾಲಿಕ ವಿಷಯಗಳತ್ತ ನಾಟಕಕಾರರ ಗಮನ ಸೆಳೆದಿದ್ದು ಅತ್ಯಂತ ಮಹತ್ವದ ವಿಚಾರವಾಗಿದೆ. ಕರ್ಕಿ ವೆಂಕಟರಮಣ ಶಾಸ್ತ್ರಿಯವರ 'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ'ದಿಂದ ಹಿಡಿದು ಕೆ.ವಿ. ಅಕ್ಷರ ಅವರ 'ಸಹ್ಯಾದ್ರಿ ಕಾಂಡ' ನಾಟಕದವರೆಗೂ ಹೊಸ ಹೊಸ ತಂತ್ರಗಳು ಆವಿಷ್ಕಾರಗೊಂಡು ನಾಟಕಗಳಲ್ಲಿ ಅಭಿವ್ಯಕ್ತಗೊಂಡಿವೆ. ಟಿ.ಪಿ. ಕೈಲಾಸಂ ರವರ 'ಟೊಳ್ಳುಗಟ್ಟಿ' ನಾಟಕವನ್ನು ಮೊದಲ ಆಧುನಿಕ ನಾಟಕವೆಂದು ಗುರುತಿಸಲಾಗಿದೆ. ಕನ್ನಡ ನಾಟಕ ಕೈಲಾಸಂ ಅವರ ಕೈಯಲ್ಲಿ ಒಮ್ಮಲೇ ಮೈ ಕೊಡವಿ ಎದ್ದವನಂತೆ ಅದ್ಭುತ ಚಟುವಟಿಕೆಯನ್ನು ಕಂಡಿತು. ಧರ್ಮ, ದೇವರು, ಅಧಿಕಾರ, ಜಾತಿ, ಪುರುಷಾಧಿಕಾರ, ಪುರೋಹಿತಶಾಹಿ, ಸಾಮ್ರಾಜ್ಯಶಾಹಿ ಮೊದಲಾದ ಸಾಂಸ್ಥಿಕ ಅಧಿಕಾರ ಕೇಂದ್ರಗಳ ವಿರುದ್ಧ ಪ್ರತಿರೋಧವಾಗಿ ಹರಿತವಾದ ವ್ಯಂಗ್ಯ ಕಟಕಿಗಳನ್ನು ಶ್ರೀರಂಗರು ಬಳಸಿ ಪ್ರೇಕ್ಷಕರ ಮನ ಸೂರೆಗೊಂಡರು. ಲಂಕೇಶರ 'ಸಂಕ್ರಾಂತಿ', 'ಗುಣಮುಖ' ನಾಟಕಗಳು, ಸಂಸ್ಕೃತೀಕರಣ, ಶೂದ್ರೀಕರಣ, ಶರಣ ಚಳುವಳಿ ಮೊದಲಾದ ಸರ್ವಾಧಿಕಾರ ಹಾಗೂ ಧಾರ್ಮಿಕ ಸಮಸ್ಯೆಗಳು ನಾಟಕದ ಸಮಸ್ಯೆಗಳಾಗಿವೆ. ಹೀಗೆ ರಂಗಭೂಮಿ ಹಲವು ಕಲಾವಿದರನ್ನು ಕೂಡಿಸಿಕೊಂಡು ಬೆಳೆಯುತ್ತದೆ. ಅದೇ ಕಾರಣಕ್ಕೆ ರಂಗಭೂಮಿಯನ್ನು 'ಮೇಳ ಕಲೆ' ಎಂದು ಕರೆಯಲಾಗುತ್ತದೆ. ಆದ್ದರಿಂದ ರಂಗಭೂಮಿಯು ಕೇವಲ ಲಲಿತಕಲೆಗಳಿಗಷ್ಟೇ ಸೀಮಿತವಲ್ಲ, ಲೋಕ ವ್ಯವಹಾರಗಳಲ್ಲಿ ಬರುವುದೆಲ್ಲವೂ ರಂಗಭೂಮಿಯ ಪರಿಕರಗಳಾಗಬಲ್ಲವು ಎಂಬುದನ್ನು ಮರೆಯಲಾಗದು. ರಂಗಭೂಮಿಯು ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಮರುಳಸಿದ್ದಪ್ಪ ಕೆ., (2002), ಆಧುನಿಕ ಕನ್ನಡ ನಾಟಕ, ಬೆಂಗಳೂರು: ಅಂಕಿತ ಪುಸ್ತಕ.
2. ಪ್ರಸನ್ನ, (1985), ನಾಟಕ ರಂಗಕೃತಿ, ಸಾಗರ: ಅಕ್ಷರ ಪ್ರಕಾಶನ.